ಶಾಮೀಲಾಗಿದೆ ಎನ್ನುವ ರೀತಿಯಲ್ಲಿ ಟೀಕಿಸಿದ್ದಾರೆ.....

MR.SPEAKER:- It was a contradictory statement. ಹೋದ ವರ್ಷ ಕಾರ್ಖಾನೆ ಮಾಲೀಕರ ಷರತ್ತಿಗೆ ಬಗ್ಗಲಿಲ್ಲ ಎನ್ನುವ ಕಾರಣಕ್ಕಾಗಿ ಗೊಬ್ಬರ ಸಿಕ್ಕಿಲ್ಲ ಎಂದು ಅವರಿಗೆ.

ಶ್ರೀ ಪಾಟಾಳ್ ನಾಗರಾಜ್:- ನಮ್ಮದು ಆ ರೀತಿ ಆರೋಪಣೆ ಏನೂ ಇಲ್ಲ. ನನ್ನ ಒತ್ತಾಯ ಏನೆಂದರೆ ಪ್ರತಿ ಹಳ್ಳಿ ಹಳ್ಳಿಗೂ ಗೊಬ್ಬರ ಕೊಡಬೇಕೆಂದು ಹೇಳಿ ನಾನು ಧರಣಿ ಮಾಡುತ್ತೇನೆ. ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ.

ಅಧ್ಯಕ್ಷರು:- ಊಟಕ್ಕೆ ಹೋಗೋಣ, ಧರಣಿ ಬೇಡ ವಾಕೌಟ್ ಮಾಡಿ.

(ಈ ಹಂತದಲ್ಲಿ ಶ್ರೀ ಪಾಟಾಳ್ ನಾಗರಾಜ್‌ರವರು ಧರಣಿ ಮಾಡಿದರು)

(ಗೊಂದಲ)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೇ, ಭೈರೇಗೌಡರ ದಕ್ಷತೆಯ ಬಗ್ಗೆ ಕಾರ್ಯ ವ್ಯಾಪ್ತಿಯ ಬಗ್ಗೆ ನಾವು ಅನುಮಾನ ಪಡುವುದಿಲ್ಲ. ಆದರೆ ಹತ್ತು ನಿಮಿಷದಲ್ಲಿ ಮುಗಿಯುವ ಕೆಲಸವನ್ನು ಇಷ್ಟೊಂದು ಲಂಬಿಸಿ ಏಕೆ ಬೆಳೆಸಿಕೊಂಡು ಹೋದರು ಎಂದು ನನಗೆ ಅರ್ಥವಾಗುತ್ತಿಲ್ಲ. ಅಸಿಸ್ಟಂಟ್ ಡೈರಕ್ಟರ್‌ರವರಿಗೆ ಹೇಳಿ ಖಾಸಗಿ ಅಂಗಡಿಯವರನ್ನು ಕರೆಯಿಸಿ ಕಾರ್ಯ ರೂಪಿಸುವುದು. ಎರಡನೆಯದು ಸಹಕಾರಿ ಸಂಘಗಳ ಮೂಲಕ ವಿತರಣೆ ಮಾಡುವುದು. ಮೂರನೆಯದು ವೇರ್ ಹೌಸ್‌ನಲ್ಲಿರತಕ್ಕಂಥ ಸ್ಟಾಕ್ ವಿತರಣೆ ಮಾಡಲು ವ್ಯವಸ್ಥೆ ಮಾಡತಕ್ಕಂಥದ್ದು ಈ 3 ಸಮಸ್ಯೆಗಳನ್ನು 24 ಗಂಟೆಯೊಳಗೆ ಬಗೆಹರಿಸುವುದನ್ನು ಬಿಟ್ಟು ಇಷ್ಟೊಂದು ದೊಡ್ಡದಾಗಿ ಬೆಳೆಸಿಕೊಂಡು ಏಕೆ ಹೋದಿರಿ? ಸರ್ಕಾರದ ಸ್ಪಷ್ಟವಾದ ನಿಲುವು ಏನು ಅಷ್ಟು ಮಾತ್ರ ನಮಗೆ ಬೇಕು. ಆದಕಾರಣ ಅಲ್ಲಿಯವರೆಗೆ ನಾವು ಕೂಡ ಧರಣಿಯಲ್ಲಿ ಪಾಲ್ಗೊಳ್ಳುತ್ತೇವೆ.

(ಈ ಸಂದರ್ಭದಲ್ಲಿ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಧರಣಿಯನ್ನು ಪ್ರಾರಂಭಿಸಿದರು)

ಅಧ್ಯಕ್ಷರು:- ಸನ್ಮಾನ್ಯ ಭೈರೇಗೌಡರಲ್ಲಿ ನಾನೇನು ವಿನಂತಿ ಮಾಡಿಕೊಳ್ಳುತ್ತೇನೆಂದರೆ ಯಾವ ಮಾತುಗಳನ್ನು ತಮ್ಮ ಚರಿತ್ರೆಗೆ ಕಳಂಕ ತರತಕ್ಕಂಥ ಅರ್ಥದಲ್ಲಿ ಅವರು ಆಡಿದ್ದಾರೆ, ಅದನ್ನು ನಾನು ಕಡತಕ್ಕೆ ಹೋಗುವುದಕ್ಕೆ ಬಿಡುವುದಿಲ್ಲ. ತಮ್ಮ ರೈತ ಪರವಾದ ನಿಲುವನ್ನು ನಾವೆಲ್ಲರೂ ಕೂಡ ಅಭಿನಂದಿಸುತ್ತೇವೆ. ತಮ್ಮ ವೈಯಕ್ತಿಕವಾದ ಪ್ರಾಮಾಣಿಕವಾದ ನಿಲುವು ಏನು ಇದೆ, ಅದನ್ನು ನಾವು ಅನುಮಾನಿಸುವುದಕ್ಕೆ ಸಿದ್ಧರಿಲ್ಲ. ಅನೇಕ ಭಾವನೆಗಳನ್ನು ಸುಮಾರು ಜನ ಸದಸ್ಯರು ಇವೊತ್ತು ವ್ಯಕ್ತಪಡಿಸಿದ್ದಾರೆ. ಅವೆಲ್ಲವನ್ನೂ ಕೂಡ ಅಳವಡಿಸಿಕೊಂಡು ಒಂದು ಹೇಳಿಕೆಯನ್ನು ಇವೊತ್ತು